# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.

## ಎಸ್.ಸಿ. ಸಂಖ್ಯೆ 34/2024

ಫಿರ್ಯಾದುದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು,
ಬಡಾವಣೆ ಪೋಲೀಸ್ ಠಾಣೆ.

-ವಿರುದ್ಧ-

ಆರೋಪಿತರುಃ- ಶೌಕತ್ ಆಲಿ @ ಇಬ್ರಾಹಿಂ ತಂದೆ ಯಮನೂರು ಸಾಬ್,
ಮತ್ತು ಇತರರು.

. . . . .

-ದೋಷಾರೋಪಣೆ-

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್.ಎಲ್.ಎಂ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತರಾದಃ-

1. ಶೌಕತ್ ಆಲಿ @ ಇಬ್ರಾಹಿಂ ತಂದೆ ಯಮನೂರು ಸಾಬ್, ವಯಸ್ಸು 23 ವರ್ಷ, ವೃತ್ತಿಃ ಬಸ್ ಚಾಲಕ, ವಾಸಃ ಕಕ್ಕರಗೊಳ್ಳ ಗ್ರಾಮ, ದಾವಣಗೆರೆ ತಾಲ್ಲೂಕು, ಜಿಲ್ಲೆ.

2. ಮೊಹ್ಮದ್ ಯೂನೂಸ್ ತಂದೆ ಮೊಹ್ಮದ್ ಹುಸೇನ, ವಯಸ್ಸು 26 ವರ್ಷ, ವೃತ್ತಿಃ ವ್ಯಾಪಾರ, ವಾಸಃ ಬಸ್ ಬುಕ್ಕಿಂಗ್ ಏಜೆಂಟ್, 1 ನೇ ಮೇನ್, 2 ನೇ ಕ್ರಾಸ್, ಭಾಷಾ ನಗರ, ದಾವಣಗೆರೆ.

3. ಸಂತೋಷ ಎಸ್ ತಂದೆ ಲೇಟ್ ಶಿವಪ್ಪ, ವಯಸ್ಸು 22 ವರ್ಷ, ವೃತ್ತಿಃ ಕೂಲಿ ಕೆಲಸ, ವಾಸಃ ರಾಗಿಮಸಲವಾಡ ಗ್ರಾಮ, ಹರಪನಹಳ್ಳಿ ತಾಲ್ಲೂಕು, ವಿಜಯನಗರ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆಃ-

ಮೊದಲನೇಯದಾಗಿ, 1 ರಿಂದ 3 ನೇ ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, ಚಾಸಾ.1 ನಿಂಗಪ್ಪ ರವರು ದಿನಾಂಕ 28.06.2023 ರಂದು ಬೆಂಗಳೂರಿನಿಂದ ದಾವಣಗೆರೆಗೆ ಚಾಲಕನಾಗಿ ರಾಘವೇಂದ್ರ ಟ್ರಾವೆಲ್ಸ್ ಬಸ್ಸನ್ನು ಟ್ರಿಪ್

ಮಾಡಿಕೊಂಡು ದಿನಾಂಕ 29.06.2023 ರಂದು ಬೆಳಗಿನ ಜಾವ 06.00 ಗಂಟೆಗೆ ಬಂದು ಅರುಣಾ ಸರ್ಕಲ್ ಹತ್ತಿರದ ಫೀಲ್ಡ್ ನಲ್ಲಿ ಬಸ್ಸನನ್ನು ನಿಲ್ಲಿಸಿಕೊಂಡು ತಿಂಡಿತಿಂದು ಬಸ್ ನಲ್ಲಿ ಮಲಗಿದ್ದು, ಮಧ್ಯಾಹ್ನ 01.30 ಗಂಟೆ ಸುಮಾರಿಗೆ ಚಾಸಾ.1 ರವರು ಓಡಿಸುತ್ತಿದ್ದ ಬಸ್ಸಿನ ಪಕ್ಕದಲ್ಲಿ 2 ನೇ ಆರೋಪಿತನಾದ ನೀನು ಬಸ್ಸನ್ನು ನಿಲ್ಲಿಸಿ, ಸದರಿ ಬಸ್ಸಿನ ಕ್ಲೀನರ್ ಆದ 3 ನೇ ಆರೋಪಿತನಾದ ನೀನು ಚಾಸಾ.1 ರವರ ಬಸ್ಸಿನ ಬಲಗಡೆ ಡೋರ್ ತೆಗೆದು ಒಳಗಡೆ ಬಂದು ಚಾಸಾ.1 ರವರನ್ನು ಎಚ್ಚರಿಸಿ ಬಸ್ಸು ಸ್ಟಾರ್ಟ್ ಆಗಿದೆ, ಹೆಡ್ ಲೈಟ್ಸ್ ಆನ್ ಆಗಿದೆ ಎಂದು ಹೇಳಿದ್ದಕ್ಕೆ ಚಾಸಾ.1 ರವರು ತಾನು ಬಸ್ಸನ್ನು ಎಲ್ಲಾ ಲಾಕ್ ಮಾಡಿಕೊಂಡು ಮಲಗಿರುತ್ತೇನೆ ಯಾರೋ ಡೋರ್ ತೆಗೆದು ಸ್ಟಾರ್ಟ್ ಮಾಡಿರುತ್ತಾರೆ ಅಂತಾ ಹೇಳುತ್ತಾ ತನ್ನ ಮೊಬೈಲನ್ನು ಹುಡುಕುತ್ತಿರುವಾಗ, ಚಾಸಾ.1 ಮತ್ತು 3 ನೇ ಆರೋಪಿತನಾದ ನಿಮ್ಮ ನಡುವೆ ಗಲಾಟೆಯಾಗಿ ಕೈಗಳಿಂದ ಹಲ್ಲೆ ಮಾಡಿಕೊಂಡಿದ್ದು, ಪುನಃ ಅದೇ ದಿನ ಅಂದರೆ ದಿನಾಂಕ 29.06.2023 ರಂದು ಸಂಜೆ 07.30 ರ ಸುಮಾರಿಗೆ ದಾವಣಗೆರೆ ಬಡಾವಣೆ ಪೋಲೀಸ ಠಾಣಾ ಸರಹದ್ದಿನ ಅರುಣಾ ಸರ್ಕಲ್ ಹತ್ತಿರದ ಖಾಲಿ ಜಾಗದಲ್ಲಿ ಚಾಸಾ.1 ನಿಂಗಪ್ಪ ರವರು ತಾನು ಚಲಾಯಿಸುತ್ತಿದ್ದ ಬಸ್ಸಿನ ಹತ್ತಿರ ನಿಂತಿರುವಾಗ 1 ರಿಂದ 3 ನೇ ಆರೋಪಿತರಾದ ನೀವು ಸಂಜೆ 07.30 ಗಂಟೆಗೆ ಚಾಸಾ.1 ಮತ್ತು 3 ನೇ ಆರೋಪಿಯ ನಡುವೆ ಆದ ಗಲಾಟೆಯ ವಿಚಾರವಾಗಿ ಚಾಸಾ.1 ನಿಂಗಪ್ಪ ರವರೊಂದಿಗೆ ಜಗಳ ತೆಗೆದು ಕೈ ಕಾಲುಗಳಿಂದ ಹೊಡೆದು ಗಾಯ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತರಾದ ನೀವು ನಿಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, ಅಪಾಯಕಾರಿ ಆಯುಧವಾದ ಚಾಕುವಿನಿಂದ ಚಾಸಾ.1 ನಿಂಗಪ್ಪ ರವರ ಕುತ್ತಿಗೆಗೆ ಹಾಕಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಆದ ಚಾಸಾ.1 ರವರು ತಲೆಯನ್ನು ಬಗ್ಗಿಸಿದಾಗ ಅವರ ಗದ್ದಕ್ಕೆ ಚಾಕುವಿನಿಂದ ಹೊಡೆದು ಸ್ವ-ಇಚ್ಛೆಯಿಂದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, 1 ನೇ ಆರೋಪಿತನಾದ ನೀನು ನಿನ್ನ ಬಳಿ ಇದ್ದ ಸಣ್ಣಚಾಕುವಿನಿಂದ ಚಾಸಾ.1 ನಿಂಗಪ್ಪ ರವರ ಕುತ್ತಿಗೆಗೆ ಹಾಕಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಚಾಸಾ.1 ನಿಂಗಪ್ಪ ರವರು ತಲೆಯನ್ನು ಬಗ್ಗಿಸಿದಾಗ ಅವರ ಗದ್ದಕ್ಕೆ ಚಾಕುವಿನಿಂದ ಗಾಯವಾಗಿದ್ದು, 1 ನೇ ಆರೋಪಿತನಾದ ನೀನು ಸದರಿ ಕೃತ್ಯಕ್ಕೆ ಬಳಸಿದ ಚಾಕುವನ್ನು ಸಾಕ್ಷಿನಾಶಪಡಿಸುವ ಉದ್ದೇಶದಿಂದ ಎಲ್ಲಿಯೋ ಬಿಸಾಡಿ, ಪುರಾವೆಗಳನ್ನು ಕಣ್ಮರೆಯಾಗುವಂತೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 201 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, ಚಾಸಾ.1 ನಿಂಗಪ್ಪ ರವರೊಂದಿಗೆ ಜಗಳ ತೆಗೆದು ಅವರನ್ನು ಕೊಲೆ ಮಾಡುವ ಉದ್ದೇಶದಿಂದ 1 ನೇ ಆರೋಪಿತನಾದ ನೀನು ನಿನ್ನ ಬಳಿ ಇದ್ದ ಸಣ್ಣಚಾಕುವಿನಿಂದ ಚಾಸಾ.1 ನಿಂಗಪ್ಪ ರವರ ಕುತ್ತಿಗೆಗೆ ಹಾಕಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಚಾಸಾ.1 ನಿಂಗಪ್ಪ ರವರು ತಲೆಯನ್ನು ಬಗ್ಗಿಸಿದಾಗ ಅವರ ಗದ್ದಕ್ಕೆ ಬಿದ್ದು ಗಾಯವಾಗಿದ್ದು, ಆರೋಪಿತರಾದ ನೀವು ಚಾಸಾ.1 ನಿಂಗಪ್ಪ ರವರನ್ನು ಹೊಡೆದು ನಿನ್ನನ್ನು ಸಾಯಿಸುತ್ತೇನೆ ಎಂದು ಅವರ ಮೇಲೆ ಬಲಪ್ರಯೋಗ ಮಾಡಿರುತ್ತೀರಿ. (ಯಾವುದೇ ಉದ್ದೇಶದಿಂದ ಅಥವಾ ಜ್ಞಾನದಿಂದ ಮತ್ತು ಅಂತಹ ಸಂದರ್ಭಗಳಲ್ಲಿ, ಆ ಕೃತ್ಯದಿಂದ ಸಾವಿಗೆ ಕಾರಣವಾದರೆ, ಅವನು ಅಪರಾಧಿ ನರಹತ್ಯೆಯ ಅಪರಾಧಿಯಾಗುತ್ತಾನೆ.) ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 308 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, ಚಾಸಾ.1 ನಿಂಗಪ್ಪ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು,

ಉದ್ದೇಶಪೂರ್ವಕವಾಗಿ ಅವಮಾನ ಮಾಡಿ ಆ ಮೂಲಕ ಅವರುಗಳಿಗೆ ಉದ್ರೇಕವನ್ನುಂಟು ಮಾಡಿದರೆ ಅಂಥ ಉದ್ರೇಕದಿಂದ ಅವರು ಶಾಂತಿಭಂಗವನ್ನು ಉಂಟು ಮಾಡಲೆಂಬ ಅಥವಾ ಇತರೆ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅಥವಾ ಹಾಗೆ ಆಗುವ ಸಂಭವವಿದೆಯೆಂದು ತಿಳಿದು ಉದ್ದೇಶಪೂರ್ವಕವಾಗಿ ಅವರನ್ನು ಅವಮಾನ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 13 ನೇ ದಿವಸ ನವೆಂಬರ್ ಮಾಹೆಯ 2024 ನೇ ಇಸವಿಯಂದು.

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>ಆರೋಪಿ ನಂ.1 ಶೌಕತ್ ಆಲಿ @ ಇಬ್ರಾಹಿಂ ತಂದೆ ಯಮನೂರು ಸಾಬ್,</u>

<u>ಆರೋಪಿಯ ಆಪಾದನೆ</u>

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 13 ನೇ ದಿವಸ ನವೆಂಬರ್ ಮಾಹೆಯ 2024 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

**(ರಾಜೇಶ್ವರಿ ಎನ್. ಹೆಗಡೆ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>ಆರೋಪಿ ನಂ.2 ಮೊಹ್ಮದ್ ಯೂನೂಸ್ ತಂದೆ ಮೊಹ್ಮದ್ ಹುಸೇನ,</u>

<u>ಆರೋಪಿಯ ಆಪಾದನೆ</u>

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 13 ನೇ ದಿವಸ ನವೆಂಬರ್ ಮಾಹೆಯ 2024 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

**(ರಾಜೇಶ್ವರಿ ಎನ್. ಹೆಗಡೆ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>ಆರೋಪಿ ನಂ.3 ಸಂತೋಷ ಎಸ್ ತಂದೆ ಲೇಟ್ ಶಿವಪ್ಪ,</u>

<u>ಆರೋಪಿಯ ಆಪಾದನೆ</u>

ಪ್ರಶ್ನೆ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 13 ನೇ ದಿವಸ ನವೆಂಬರ್ ಮಾಹೆಯ 2024 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

**(ರಾಜೇಶ್ವರಿ ಎನ್. ಹೆಗಡೆ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.